ಕರ್ನಾಟಕ ವಿಧಾನ ಸಭೆ

ಬುಧವಾರ 29ನೇ ಮಾರ್ಚ್ 1989

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ 11-00 ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು (ಶ್ರೀ ಬಿ. ಜಿ. ಬಣಕಾರ್) ಅವರು ಪೀಠವನ್ನು ಅಲಂಕರಿಸಿದ್ದರು.

ನಿಯಮ ೬೮ರ ಮೇರೆಗೆ

ಗೃಹ ನಿರ್ಮಾಣ ಸಹಕಾರ ಸಂಘಗಳ ಅವ್ಯವಹಾರದ ಬಗ್ಗೆ ಶ್ರೀ . ಜಿ. ಬಿ. ಕೆ. ರಾವ್ ಅವರ ಸಮಿತಿಯು ಸಲ್ಲಿಸಿರುವ ವರದಿಯ ಬಗ್ಗೆ

ಅಧ್ಯಕ್ಷರು.—ಮಾನ್ಯ ಮೊಯಿಲಿಯವರೆ. ನಿಯಮ ೬೮ರ ಪ್ರಕಾರ ಈ ವರದಿಯ ಬಗ್ಗೆ ನಾವು ಚರ್ಚೆ ಮಾಡಬೇಕೆಂದು ಅಜೆಂಡಾವಲ್ಲಿ ತೆಗೆದುಕೊಂಡಿದ್ದೇವೆ. ಈಗ ತಾವು ರೂಲ್ ೬೮ ತೆಗೆಯಿರಿ. ಅದರಲ್ಲಿ ಟೈಮ್ ಎಷ್ಟೆಷ್ಟು ಆಗುತ್ತದೆಂದು ನೋಡೋಣ.

ಶ್ರೀ ಬಿ. ಬಸವಲಿಂಗಪ್ಪ.—ನಿಮ್ಮ ಅಕಾಂಕ್ಷೆ ನಮಗೆ ಅರ್ಥವಾಗುತ್ತಿದೆ. ಆದರೆ ಇದು ಅಡ್ಜರ್ನ್‌ಮೆಂಟ್ ಮೋಷನ್. ಇದನ್ನು ಕನ್‌ವರ್ಟ್ ಮಾಡಿದ್ದೀರಿ. ಅದನ್ನು ನಾವು ಒಪ್ಪಿಕೊಂಡಿದ್ದೇವೆ. ಇದರಲ್ಲಿ ಟೈಮ್ ವಿಚಾರ ಬರುವುದಿಲ್ಲ. ಈಗ ಸರ್ಕಾರದ ಕೆಲಸ ಮುಗಿದು ಹೋಗಿದೆ ನಾವೆಲ್ಲಾ ಮುಗಿಸಿಕೊಟ್ಟಿದ್ದೇವೆ. ಈಗ ಇನ್ನು ಏನು ಉಳಿದಿದೆ ಅದನ್ನು ಮುಗಿಸಿಕೊಡುತ್ತೇವೆ.

ಶ್ರೀ ಎಂ. ರಘುಪತಿ.—ಅಧ್ಯಕ್ಷರೆ, ನಾನು ಒಂದು ನೋಟೀಸು ಕೊಟ್ಟಿದ್ದೇನೆ.

(ಗೊಂದಲ)

ಅಧ್ಯಕ್ಷರು —ದಯವಿಟ್ಟು ಮಾನ್ಯ ಸದಸ್ಯರೆಲ್ಲರೂ ಕುಳಿತುಕೊಳ್ಳಬೇಕು.

(ಗೊಂದಲ)

ಶ್ರೀ ಎಂ. ರಘುಪತಿ.—ಅಧ್ಯಕ್ಷರೆ, ನಾನು ನಿಯಮ ೬೮ರ ಪ್ರಕಾರ ಒಂದು ನೋಟೀಸು ಕೊಟ್ಟಿದ್ದೇನೆ. ಅದು ಏನೆಂದರೆ ಕಕ್ಕೇರ್ ಆಯೋಗದ ಬಗ್ಗೆ,.....

(ಗೊಂದಲ)

ಅಧ್ಯಕ್ಷರು.—ಈ ತರಹ ಆದರೆ ನಾನು ಸದನ ಹೇಗೆ ನಡೆಸಬೇಕು ?

(ಗೊಂದಲ)

ಶ್ರೀ ಧರ್ಮಸಿಂಗ್.—ಅಧ್ಯಕ್ಷರೆ,.....

(ಗೊಂದಲ)

ಶ್ರೀ ಬಿ. ಎಸ್. ಯಡಿಯೂರಪ್ಪ.—ಅಧ್ಯಕ್ಷರೆ, ನಾವು ಇಲ್ಲಿ ಗೃಹ ನಿರ್ಮಾಣ ಸಹಕಾರ ಸಂಘ ಎಂದು ತಕ್ಷಣ ಆ ಕಡೆಯವರು ಎಲೆಕ್ಟ್ರಿಕ್ ಷಾಕ್ ಒಡೆದ ಹಾಗೆ ಆಡುತ್ತಿದ್ದಾರೆ.

(ಗೊಂದಲ)

ಅಧ್ಯಕ್ಷರು.—ಈಗ ಅವರು ಏನು ಹೇಳುತ್ತಾರೆ ಹೇಳಲಿ' ಆನಂತರ ನೀವು ಹೇಳುವುದನ್ನು ಹೇಳಿ ಎರಡೂ ಪಕ್ಷದವರಿಗೂ ನಾನು ಮಾತನಾಡುವುದಕ್ಕೆ ಅವಕಾಶಕೊಡುತ್ತೇನೆ. ತಾವು ದಯವಿಟ್ಟು ಕುಳಿತುಕೊಳ್ಳಬೇಕು.

(ಗೊಂದಲ)

ಶ್ರೀ ಎಂ. ವೀರಪ್ಪಮೊಯಿಲಿ.—ಅಧ್ಯಕ್ಷರೆ, ಅವರು ಹೇಳಲಿಕ್ಕೆ ಇದೇನು ಜೀರೋ ಹವರಲ್ಲ. ಈಗ ಅಜೆಂಡ ನಮ್ಮ ಮುಂದೆ ಇದೆ.

(ಗೊಂದಲ)

ಅಧ್ಯಕ್ಷರು.—ಹಾಗಾದರೆ, ನಾನು ಏನು ಮಾಡಬೇಕು ಹೇಳಿ.

ಶ್ರೀ ಎಂ. ವೀರಪ್ಪಮೊಯಿಲಿ. ತಾವು ನಿಯಮಾವಳಿ ಪ್ರಕಾರ ಹೋಗಬೇಕು.

ಅಧ್ಯಕ್ಷರು.—ಅಜೆಂಡ ಪ್ರಕಾರ ಹೋಗಬೇಕಾದರೆ ಅವರೂ ಗಲಾಟೆ ಮಾಡಬಾರದು, ನೀವು ಗಲಾಟೆ ಮಾಡಬಾರದು,

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅಧ್ಯಕ್ಷರೆ, ನಾವು ಅಡ್ಜರ್ನ್‌ಮೆಂಟ್ ಮೋಷನ್ ಕೊಟ್ಟಿರ್ತ್ತೇವೆ. ಅವರು ಸದನ್ನಾಗಿ ಎದ್ದು ಕೂಡಲೇ ಇಂತಹ ರಿಪೋರ್ಟ್ ಚರ್ಚೆಗೆ ತೆಗೆದುಕೊಳ್ಳಬೇಕೆಂದು ಎಂದರೆ ಏನು ಅರ್ಥ.

(ಗೊಂದಲ)

ಶ್ರೀ ಎಂ. ವೀರಪ್ಪಮೊಯಿಲಿ.—ಪ್ರಶ್ನೋತ್ತರ ವೇಳೆ ಮುಗಿದ ಮೇಲೆ ಪ್ರಾಮುಖ್ಯವಾದ ವಿಷಯ ಇದ್ದರೆ ತೆಗೆದುಕೊಳ್ಳಬಹುದು.

(ಗೊಂದಲ)

ಅಧ್ಯಕ್ಷರೆ,—ಈಗ ಅವರು ಒಂದು ನೋಟೀಸ್ ಕೊಟ್ಟಿದ್ದಾರೆ. ಅದನ್ನು ಸಭೆಯ ಗಮನಕ್ಕೆ ತರಬೇಕ್ಕೋ ತರಬಾರದೋ ಹೇಳಿ. ಈಗ ನಾನು ನಿಯಮ ೬೮ರ ಪ್ರಕಾರ ಚರ್ಚೆಗೆ ಅವಕಾಶ ಮಾಡಿಕೊಟ್ಟಿದ್ದೆನೆ ಈ ತರಹ ತಾವು ಗಲಾಟೆ ಮಾಡಿದರೆ ನಾನು ಸದನ ನಡೆಸುವುದಕ್ಕಾಗುವುದಿಲ್ಲ. ನಾನು ಹೀಗೆ ಕುಳಿತುಕೊಳ್ಳುತ್ತೇನೆ, ನೀವು ಗಲಾಟೆ ಮಾಡಿಕೊಂಡು ಹೋಗಿ.

ಶ್ರೀ ಧರ್ಮಸಿಂಗ್.—ಅಧ್ಯಕ್ಷರೆ.....

(ಗೊಂದಲ)

ಅಧ್ಯಕ್ಷರು.—ಈ ತರಹ ನೀವು ನನ್ನನ್ನು ಹೆದರಿಸುವುದು ಬಿಟ್ಟುಬಿಡಿ. ಮಾನ್ಯ ಖಾರ್ಗೆಯವರೆ ನೀವು ಹೇಗೆ ಮಾತನಾಡುತ್ತಿದ್ದೀರಿ, ಮೊಯಿಲಿಯವರು ಹೇಗೆ ಮಾತನಾಡುತ್ತಿದ್ದಾರೆ. ಮಾನ್ಯ ಧರ್ಮಸಿಂಗ್‌ರವರು ಹೇಗೆ ಹೆದರಿಸುತ್ತಿದ್ದಾರೆ ಎಂಬ ಬಗ್ಗೆ ತಾವೇ ಹೇಳಿ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅಧ್ಯಕ್ಷರೆ, ಅವರ ಧ್ವನಿ ಹಾಗೆಯೇ ಇರುವುದು.

(ಗೊಂದಲ)

ಅಧ್ಯಕ್ಷರು.—ನನಗೂ ಅಧಿಕಾರವಿದೆ. ನಾನು ಇನ್ನೂ ಅವರಿಗೆ ಮಾತನಾಡಲು ಅವಕಾಶವನ್ನು ಕೊಟ್ಟಿಲ್ಲ. ಅವರು ಏನು ನೋಟೀಸ್ ಕೊಟ್ಟಿದ್ದಾರೆಂಬುದನ್ನು ಈ ಸದನಕ್ಕೆ ತಿಳಿಸುತ್ತೇನೆ.....

(ಗೊಂದಲ)

ಅಧ್ಯಕ್ಷರು,—ನಾನು ಪ್ರತಿಸಾರಿಯೂ ಎಷ್ಟು ಅಡ್ಜರ್ನ್‌ಮೆಂಟ್ ಮೋಷನ್ ಬರುತ್ತವೋ ಅಷ್ಟನ್ನೂ ಸದನಕ್ಕೆ ತಿಳಿಸಿದ್ದೇನೆ ಈಗ ಮುಂದೆ ನಾನು ಏನು ಮಾಡಬೇಕೆ ದಿದ್ದೇನೆ ಎಂಬುದನ್ನು ತಮಗೆ ಹೇಳುತ್ತೇನೆ. ಅವರು ನೋಟೀಸ್‌ನ್ನು ಕೊಟ್ಟರುವುದನ್ನು ಮಾತ್ರ ನಾನು ಹೇಳುತ್ತೇನೆ. It is my duty to bring to the notice of this House whatever I receive.

SRI M. MALLIKARJUN KHARGE. Sir, after the question hour, you can bring that to the notice of the House.

(ಗೊಂದಲ)

ಅಧ್ಯಕ್ಷರು.—ನನಗೂ ಮಾತನಾಡಲು ನೀವು ಅವಕಾಶವನ್ನು ಕೊಡುವುದಿಲ್ಲ ಎಂದರೆ ಅದು ಸರಿಯಾಗುವುದಿಲ್ಲ. ನನಗೆ ಏನು ನೋಟೀಸ್ ಬಂದಿದೆ, ನಾನು ಏನು ಸ್ವೀಕರಿಸಿದ್ದೇನೆ, ಅದನ್ನು ಸದನಕ್ಕೆ ತಿಳಿಸುವುದು ನನ್ನ ಕರ್ತವ್ಯ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ನಿನ್ನೆಯ ದಿವಸ ಬಿಲ್ಸ್ ಎಲ್ಲಾ ಆದಮೇಲೆ. ಕ್ವಶ್ಚನ್ ಹವರ್ ಆದಮೇಲೆ.....

ನಿಲುವಳಿ ಸೂಚನೆ

ಠಕ್ಕರ್ ಆಯೋಗದ ವರದಿ

ಅಧ್ಯಕ್ಷರು.—ಪ್ರತಿ ದಿನ ಕ್ವೆಶ್ಚನ್ ಹವರ ಇರುತ್ತಿತ್ತು, ದುರ್ದೈವ ಇವತ್ತು ಕ್ವೆಶ್ಚನ್‌ಹವರ್ ಇಲ್ಲ. ನಾನು ಈಗ ಸದನದ ಗಮನಕ್ಕೆ ತರುತ್ತೇನೆ, ಮುಂದೆ ಇದನ್ನು ಅಲೋ ಮಾಡುವುದು, ಡಿಸ್ ಅಲೋ ಮಾಡುವುದು ನನಗೆ ಸೇರಿದ್ದುದು. ನಾನು ಇನ್ನೂ ಇದರ ಬಗ್ಗೆ ರೂಲಿಂಗ್ ಕೊಟ್ಟಿಲ್ಲ. ಆದರೆ ಇದನ್ನು ನಾನು ತಪ್ಪು ನಜರಿಗೆ ತರುತ್ತಿದ್ದೇನೆ. ಆದರೂ ಸಹ ಇದನ್ನು ಒತ್ತಾಯ ಮಾಡುತ್ತಿಲ್ಲ. ಮಾನ್ಯ ರಘುಪತಿ ಸುವರು ಎದ್ದುನಿಂತು ಇದಕ್ಕೆ ಅವಕಾಶವನ್ನು ಕೊಡಿ ಎಂದು ಕೇಳಿದರು. ಅದು ಏನು ಎಂಬುದು ನನಗೂ ಗೊತ್ತಿಲ್ಲ. ನಾನು ಅದನ್ನು ನೋಡಿಲ್ಲ. ನಾನು ನನ್ನ ಛೇಂಬರ್ ನಿಂದ ಬರುವಾಗ ಅವರು ಇದನ್ನು ತಂದು ಕೊಟ್ಟಿದ್ದಾರೆ, ಇದು ಏನು ಏಂಬುದನ್ನು ಈಗ ನೋಡಿ ಹೇಳುತ್ತೇನೆ.....

(ಗೊಂದಲ)

SRI M. MALLIKARJUA KHARGE.—They can only raise it after the Question Hour.

(ಗೊಂದಲ)

ಶ್ರೀ ಚಂದ್ರಕಾಂತ ಜಿ. ಬೆಲ್ಲದ್.—ಇದು ದೇಶದ ಭವ್ಯತೆಗೆ ಸಂಬಂದಪಟ್ಟ ವಿಚಾರವಾಗಿದೆ.

ಅಧ್ಯಕ್ಷರು.—ನಾನು ಇನ್ನೂ ಅವರಿಗೆ ಅವಕಾಶವನ್ನು ಕೊಟ್ಟಿಲ್ಲ. ಅವರು ಏನು ನೋಟಿಸ್ ಕೊಟ್ಟಿದ್ದಾರೆಂಬುದನ್ನು ಬಾಯಿಯಲ್ಲಿ ಹೇಳುವುದು ಬೇಡ, ಸದನಕ್ಕೇ ಓದಿ ಹೇಳುತ್ತೇನೆ.

SRI M. MALLIKARJUNA KHARGE.—You can tell it after the question hour.

ಅಧ್ಯಕ್ಷರು.—ಆದೇನೂ ಸಂಬಂಧವಿಲ್ಲ, I can tell it at any time.

(ಗೊಂದಲ)